# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ.ವೆಂಕಟೇಶ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 624**

**ಉತ್ತರಿಸಬೇಕಾದ ದಿನಾಂಕ : 11.07.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಸಿಷ್ಟ ಸೌಹಾರ್ದ ಸಹಕಾರ ಸಂಘದಲ್ಲಿ ಸದಸ್ಯರು ಮತ್ತು ಸದಸ್ಯೇತರರು ಹೂಡಿಕೆ ಮಾಡಿರುವ ಠೇವಣಿ ಮೊತ್ತ ಎಷ್ಟು: | ದಿನಾಂಕ:30-06-2021ರ ಅಂತ್ಯಕ್ಕೆ ಲಭ್ಯವಿರುವ ಮಾಹಿತಿಯನ್ವಯ ಸಹಕಾರಿಯಲ್ಲಿರುವ ಠೇವಣಿ ಖಾತೆಗಳ ಸಂಖ್ಯೆ 10,922 ಗಳಾಗಿದ್ದು, ಠೇವಣಿ ಮೊತ್ತ ರೂ.291,48,53,460/- ಆಗಿರುತ್ತದೆ. |
| ಆ) | ಈ ರೀತಿ ಹೂಡಿಕೆ ಮಾಡಿರುವ ಎಷ್ಟು ಠೇವಣಿದಾರರಿಗೆ ಇದುವರೆವಿಗೂ ಎಷ್ಟು ಮೊತ್ತವನ್ನು ಮರು ಪಾವತಿಸಲಾಗಿದೆ (ವಿವರ ಒದಗಿಸುವುದು) | ವಿಶೇಷಾಧಿಕಾರಿಯ ಅವಧಿಯಲ್ಲಿ ಸಹಕಾರಿಯ 729 ಠೇವಣಿ ಖಾತೆಗಳನ್ನು ಮುಕ್ತಾಯಗೊಳಿಸಿ ರೂ.26,97,00,000/- ಗಳ ಠೇವಣಿ ಹಣವನ್ನು ಸಹಕಾರಿಯಿಂದ ಠೇವಣಿದಾರರಿಗೆ ಮರುಪಾವತಿಸಲಾಗಿರುತ್ತದೆ ಎಂದು ಸಂಯುಕ್ತ ಸೌಹಾರ್ದ ಸಹಕಾರಿಯು ವರದಿ ಮಾಡಿರುತ್ತಾರೆ. |
| ಇ) | ಈ ಸಂಘದ ಆಡಳಿತ ಮಂಡಳಿ ಚುನಾವಣೆಗೆ ಕ್ರಮ ಕೈಗೊಳ್ಳಲಾಗಿದೆಯೇ; (ವಿವರಗಳನ್ನು ನೀಡುವುದು) | ಸಂಯುಕ್ತ ಸಹಕಾರಿಯು, ವಶಿಷ್ಟ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರನ್ನು ಅನರ್ಹಗೊಳಿಸಿದ ಹಿನ್ನೆಲೆಯಲ್ಲಿ ಹಾಗೂ ಸಹಕಾರಿಯಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾದ ಕಾರಣ ಸಂಯುಕ್ತ ಸಹಕಾರಿಯಿಂದ ದಿನಾಂಕ:03.08.2021 ರಂದು ವಿಶೇಷಾಧಿಕಾರಿ ನೇಮಕ ಮಾಡಲಾಗಿರುತ್ತದೆ. ವಿಶೇಷಾಧಿಕಾರಿಗಳು ದಿನಾಂಕ:07.08.2021 ರಂದು ಅಧಿಕಾರ ವಹಿಸಿಕೊಂಡು ಸಹಕಾರಿಯ ಆಡಳಿತ ಮಂಡಲಿ ಚುನಾವಣೆ ನಡೆಸುವ ಕುರಿತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ ಮಾನ್ಯ ಚುನಾವಣಾಧಿಕಾರಿಗಳು ದಿನಾಂಕ:20.12.2021 ರಂದು ರಿಟರ್ನಿಂಗ್ |

| | | |
|---|---|---|
| | | ಅಧಿಕಾರಿಯನ್ನು ನೇಮಕ ಮಾಡಿರುತ್ತಾರೆ. ರಿಟರ್ನಿಂಗ್ ಅಧಿಕಾರಿಗಳು ದಿನಾಂಕ:29.12.2021 ರಂದು ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದು, ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿದ್ದು, ನಾಮಪತ್ರ ಸಲ್ಲಿಕೆಗೆ ಅಂತಿಮ ದಿನದಂದು ಯಾವುದೇ ನಾಮಪತ್ರ ಸಲ್ಲಿಕೆಯಾಗಿರುವುದಿಲ್ಲ. |
| ಈ) | ಈ ಸಂಘದ ಆಡಳಿತಾಧಿಕಾರಿ/ ವಿಶೇಷಾಧಿಕಾರಿ ಅವಧಿ ಮುಗಿದಿದ್ದರೂ ಅವರುಗಳು ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ ಉಲ್ಲಂಘನೆ ಮಾಡಿದವರ ವಿರುದ್ಧ ಯಾವ ಕ್ರಮ ಜರುಗಿಸಲಾಗುವುದು? | ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ 6 ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ವಿಶೇಷಾಧಿಕಾರಿಯು ಮುಂದುವರೆಯಲು ಅವಕಾಶವಿಲ್ಲ. ಈ ಹಿನ್ನಲೆಯಲ್ಲಿ ಮತ್ತು ಸಹಕಾರಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಿ.ಐ.ಡಿ ತನಿಖೆಯಲ್ಲಿರುವುದಿಂದ ಹಾಗೂ ಠೇವಣಿದಾರರ ಹಿತಾಸಕ್ತಿ ಕಾಪಾಡಲು ಸಂಯುಕ್ತ ಸಹಕಾರಿಯಿಂದ ವಿಶೇಷಾಧಿಕಾರಿ ಅವಧಿ ವಿಸ್ತರಿಸಲು, ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿತ್ತು. ಅದರಂತೆ ಆದೇಶ ಸಂಖ್ಯೆ ಸಿಒ 95 ಸಿಆರ್‌ಸಿ 2022, ಬೆಂಗಳೂರು, ದಿನಾಂಕ:11.01.2023 ರನ್ವಯ ವಿಶೇಷಾಧಿಕಾರಿ ಅವಧಿಯನ್ನು ದಿನಾಂಕ:02.08.2023 ರವರೆಗೆ ವಿಸ್ತರಿಸಿ ಆದೇಶಿಸಿದೆ. (ಆದೇಶದ ಪ್ರತಿ **ಅನುಬಂಧ-ಅ** ರಲ್ಲಿ ಲಗತ್ತಿಸಿದೆ) |

**ಸಂಖ್ಯೆ: ಸಿಒ 124 ಸಿಸಿಬಿ 2023**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

ಅನುಬಂಧ - 6

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು, ಈ ಸಂಘದ ವಿಶೇಷಾಧಿಕಾರಿ ಅವಧಿಯನ್ನು ವಿಸ್ತರಿಸುವ ಕುರಿತು

**ಓದಲಾಗಿದೆ:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ರವರ ಪತ್ರ ಸಂಖ್ಯೆ: ಸ./ಶಾ-168/ನಿ/ ಬಿಜಿಯು -026/2021-22/792, ದಿನಾಂಕ: 12-08-2022.
2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಆರ್ ಸಿಎಸ್/ಆರ್ಎಸ್ಆರ್/ಸೌಹಾರ್ದ/113/2020-21, ದಿನಾಂಕ:06-12-2022.
3. ಪೊಲೀಸ್ ಇನ್ಸ್‌ಪೆಕ್ಟರ್, ಸಿಟಿ & ಆರ್ ವಿಭಾಗ, ಬೆಂಗಳೂರು ಇವರ ಪತ್ರ ಸಂಖ್ಯೆ: CRM/61/CT&R/CID/2020, ದಿನಾಂಕ: 09-01-2023.

***

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರ. ಸಂ. (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇವರ ಪತ್ರದಲ್ಲಿ ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಈ ಸಂಘದ ಆಡಳಿತ ಮಂಡಳಿಯನ್ನು ಅನರ್ಹಗೊಳಿಸಿ ದಿನಾಂಕ 03-08-2021 ರಂದು ವಿಶೇಷಾಧಿಕಾರಿಯನ್ನಾಗಿ ಶ್ರೀ ನಾರಾಯಣ ಹೆಗಡೆ, ಇವರನ್ನು ನೇಮಿಸಿದ್ದು, ವಿಶೇಷಾಧಿಕಾರಿ ಅವಧಿಯು ದಿನಾಂಕ: 02-02-2022ರಂದು ಮುಕ್ತಾಯಗೊಂಡಿರುವುದರಿಂದ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ 1997ರ ಕಲಂ 38ಎ(1)ರನ್ವಯ ವಿಶೇಷಾಧಿಕಾರಿ ಅವಧಿ ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದಿರುವುದರಿಂದ ಆಡಳಿತಾಧಿಕಾರಿ ನೇಮಕ ಮಾಡುವ ಬಗ್ಗೆ ಮುಂದಿನ ಕ್ರಮವಿಡಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ. ಸಂ. (2)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಸಹಕಾರಿಯ ವಿಶೇಷಾಧಿಕಾರಿಯಾದ ಶ್ರೀ ನಾರಾಯಣ ಹೆಗಡೆ, ಡಿಜಿಎಂ, ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇವರ ಅವಧಿಯು ಈಗಾಗಲೇ ಮುಕ್ತಾಯಗೊಂಡಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಪ್ರಕರಣ 38ಎ ಪ್ರಕಾರ ಸಹಕಾರಿಗೆ ವಿಶೇಷಾಧಿಕಾರಿಯ ಅವಧಿಯನ್ನು 06 ತಿಂಗಳ ಅವಧಿಗೆ ನೇಮಕ ಮಾಡಲು ಮಾತ್ರ ಅವಕಾಶವಿದ್ದು, ವಿಶೇಷಾಧಿಕಾರಿಯ ಅವಧಿಯನ್ನು ವಿಸ್ತರಿಸಲು ಅಧಿನಿಯಮದಲ್ಲಿ ಅವಕಾಶವಿರುವುದಿಲ್ಲ ಎಂದು ತಿಳಿಸಿ. ಪ್ರಸ್ತುತ ಸಹಕಾರಿಯ ಕೆಲವು ಸ್ವತ್ತುಗಳು ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿದ್ದು, ಅವುಗಳನ್ನು ನಿರ್ವಹಿಸಲು ಆಡಳಿತಾಧಿಕಾರಿಯ ಅಗತ್ಯತೆ ಇರುವುದರಿಂದ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಸಿಓಡಿಯವರು ಪ್ರಸ್ತಾಪಿಸಿರುವುದಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ. ಸಂ. (3)ರ ಪತ್ರದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್, ಸಿಟಿ & ಆರ್ ವಿಭಾಗ, ಬೆಂಗಳೂರು ಇವರು ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಇಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಿ.ಐ.ಡಿ. ತನಿಖೆ ನಡೆಯುತ್ತಿದ್ದು, ತನಿಖೆ ಸಂಬಂಧ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮತ್ತು ಠೇವಣಿದಾರರಿಗೆ ಅನುಕೂಲವಾಗುವಂತೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70 ರನ್ವಯ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರದಂತೆ ವಿಶೇಷಾಧಿಕಾರಿಯ ಅವಧಿಯನ್ನು ವಿಸ್ತರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 95 ಸಿಆರ್‌ಸಿ 2022, ಬೆಂಗಳೂರು, ದಿನಾಂಕ: 11-01-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70 ರನ್ವಯ ಪ್ರದತ್ತವಾಗಿರುವ ಅಧಿಕಾರದನ್ವಯ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಇದರ ವಿಶೇಷಾಧಿಕಾರಿ ಅವಧಿಯನ್ನು **ದಿನಾಂಕ: 03-02-2022 ರಿಂದ 02-08-2023 ರವರೆಗೆ** ವಿಸ್ತರಿಸಿ ಆದೇಶಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಎ.ಸಿ. ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಇವರಿಗೆ:

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಸಹಕಾರ ಸಂಘಗಳ ನಿಬಂಧಕರು, ನಂ.1 ಆಲಿ ಆಸ್ಕರ್ ರಸ್ತೆ, ಬೆಂಗಳೂರು-560052.
3. ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು, ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
4. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು.
5. ವಿಶೇಷಾಧಿಕಾರಿ, ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು
7. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು
8. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು.
9. ಪೊಲೀಸ್ ಇನ್ಸಪೆಕ್ಟರ್, ಸಿಟಿ & ಆರ್ ವಿಭಾಗ, ಪೊಲೀಸ್ ಇನ್ಸಪೆಕ್ಟರ್ ರವರ ಕಛೇರಿ, ಸಿ.ಟಿ. ಆರ್ ವಿಭಾಗ, ಸಿ.ಐ.ಡಿ. ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು.
10. ಶಾಖಾ ರಕ್ಷಾಕಡತ: ಹೆಚ್ಚುವರಿ ಪ್ರತಿಗಳು.